ಬಹಳ ದಿನಗಳ ನಂತರ ಮನಸಾರೆ ನಗುವುದನ್ನು ಕಂಡ ಕಲಾವತಿಗೆ ಒಳಗೊಳಗೆ ಖುಷಿಯಾಗಿತ್ತು. ಆದರೆ ಆ ಖುಷಿಯ ಹಸಿ ಎಷ್ಟು ಹೊತ್ತಿನತನಕ ಇರುತ್ತದೊ ಏನೊ ಎಂದು ಭಾವಿಸಿದ ಆಕೆಗೆ ಹೆದ್ದಾರಿಯ ಪಕ್ಕದಲ್ಲಿ ಕಾರು ನಿಲ್ಲಿಸಿದ್ದರಿಂದ ಜೀವದಾಗೆ ಜೀವ ಇಲ್ದಂಗಾಗಿತ್ತು. ಅಬ್ಬರಿಸುವ ಕಡಲಿಗಿಂತ ಮೌನವಾಗಿ ಹಿಂದೆ ಸರಿದ ಸಮುದ್ರದ ವರ್ತನೆಯಂತೆ ರೂಪಾಳ ಮಾನಸ ಸರೋವರ ಊಹೆಗೂ ನಿಲುಕಲಾರದ್ದಾಗಿತ್ತು. ಚಿಕ್ಕ ವಯಸ್ಸಿಗೆ ತಾಯಿಯನ್ನು ಕಳೆದುಕೊಂಡ ತಬ್ಬಲಿತನ ಅವಳ ಮನಸ್ಸಿಗೆ ಗಾಢವಾದ ಪರಿಣಾಮವನ್ನುಂಟು ಮಾಡಿತ್ತು. ಹೆಂಡತಿ ಸತ್ತು ವರ್ಷ ತುಂಬುವುದರೊಳಗೆ ಉಗ್ರಪ್ಪನಿಗೆ ಎರಡನೇ ಮದುವೆ ಮಾಡಿದ್ದರಿಂದ, ಮನೆಗೆ ಮಲತಾಯಿ ಬಂದಮೇಲೆ ನಮ್ಮ ಹುಡುಗಿ ಕಣ್ಣೀರಲ್ಲಿ ಕೈತೊಳೆಯೋದು ಬೇಡ ಅಂತ್ಹೇಳಿ ರೂಪಾಳ ತಾಯಿಯ ತವರು ಮನೆಯವರು ಬಂದು ಕರಕೊಂಡು ಹೋಗಿದ್ದರು.

ಮದುವೆಯಾದ ಹೊಸತರಲ್ಲಿ ನಮ್ಮ ನಡುವೆ ಇರೋದಕ್ಕಿಂತ ಅವರ ಅನಗುತ್ತಲೆಜ್ಜಿ ಮನೆಯಲ್ಲಿರೋದೆ ಒಳ್ಳೆಯದೆಂದು ಭಾವಿಸಿದ ಉಗ್ರಪ್ಪನು ಮಗಳನ್ನು ಕಳಿಸಿಕೊಟ್ಟಿದ್ದ. ಪಂಜರದಿಂದ ಹೊರಬಂದ ಹಕ್ಕಿಯ ಹಾಗೆ ಹಳ್ಳಿಯ ವಾತಾವರಣದಲ್ಲಿ ಅಜ್ಜಅಜ್ಜಿಯರ ಅಕ್ಕರೆಯಲ್ಲಿ ಮೂವರು ಸೋದರ ಮಾವಂದಿರ ಮುತುವರ್ಜಿಯಲ್ಲಿ ಬಾಲ್ಯವನ್ನು ಕಳೆದು ಹರೆಯಕ್ಕೆ ಕಾಲಿಟ್ಟ ರೂಪಾಳಿಗೆ ಅವರಜ್ಜನ ಹೊಲ-ಮನೆ ಕೆಲಸಗಳಿಗೆ ಕಾಯಂ ಕೂಲಿಯಾಳಾಗಿ ಬರುತ್ತಿದ್ದ ಭೀಮಜ್ಜನ ಮಗ ಪ್ರಕಾಶನ ಪರಿಚಯವಾಗಿತ್ತು. ರಜೆಯ ದಿನಗಳಲ್ಲಿ ಅವನೂ ಸಹ ಹೊಲದ ಕೆಲಸಕ್ಕೆ ಹೋಗತೊಡಗಿದ್ದರಿಂದ ಅವರ ಪರಿಚಯ ಮತ್ತಷ್ಟು ಗಟ್ಟಿಗೊಂಡು ಗಾಢವಾಗಿ ಬೇರು ಬಿಡುತ್ತಿರುವಾಗ. ಉಗ್ರಪ್ಪನ ಎರಡನೇ ಹೆಂಡತಿ ಕಲಾವತಿಗೆ ಎಂಟತ್ತು ವರ್ಷಗಳಾದರೂ ಹುಳಿ ಮಾವನ್ನು ಕಚ್ಚಿತಿನ್ನುವ ಆಸೆಯಾಗಲಿ, ಯಾರಿಗೂ ಕಾಣದಂತೆ ಕೆಮ್ಮಣ್ಣು ತಿನ್ನುವ ಬಯಕೆಯಾಗಲಿ ಆಗಿರಲಿಲ್ಲ. ಮನೆಯಲ್ಲಿ ಒಂಟಿಯಾಗಿ ಎಲ್ಲಾ ಕೆಲಸ ಮಾಡೋಕಾಗದೆ ಆ ಬೇಸರವನ್ನು ನೀಗಿಸಿಕೊಳ್ಳಲು, 'ಕೈಗೆ ಬಂದಿರೋ ಮಗಳ್ನ ಏಟು ದಿನಾಂತ ಕಂಡೋರು ಮನೇಲಿ ಬಿಡ್ತೀಯಾ? ಕರಕಂಬಂದು ನಮ್ಮ ಹದ್ದುಬಸ್ತಿನಲ್ಲಿ ನಾವು ಇಟ್ಕೋಬೇಕು' ಎಂದು ಹೆಂಡ್ತಿ ಹೇಳಿದ ಮಾತಿಗೆ ಉಗುಳು ದಾಟದ ಉಗ್ರಪ್ಪ ಮಗಳನ್ನ ಕರೆಯಲು ಹೋದಾಗ, ಮೊಮ್ಮಗಳ ರೂಪದಲ್ಲಿ ಮನೆ ತುಂಬಾ ಮಗಳೇ ಓಡಾಡ್ತಿದಾಳೇನೊ ಎನ್ನುವ ಆನಂದ ಆ ಹಿರಿ ಜೀವಗಳಿಗಿತ್ತು. ಬೆಳೆದು ನಿಂತ ಮೊಮ್ಮಗಳನ್ನು ಕಳಿಸಿಕೊಡೋಕೆ ಅವರ ಮನಸ್ಸಿಗೆ ಸ್ವಲ್ಪ ಕಷ್ಟವೆನಿಸಿದರೂ ಅದನ್ನು ತೋರಗೊಡದೆ, 'ಎಡುಪು-ದಡುಪು ಬರ್ತಾ ಇರ್ತೀವಿ, ನೀನು ಹೋಗಿ ಬಾರವ್ವ' ಎಂದು ಮೊಮ್ಮಗಳಿಗೆ ಧೈರ್ಯ ಹೇಳುತ್ತಲೇ ತಾವು ಕಣ್ಣೊದ್ದೆ ಮಾಡಿಕೊಂಡ ಅಜ್ಜ-ಅಜ್ಜಿ ಒಲ್ಲದ ಮನಸ್ಸಿನಿಂದ ಕಳಿಸಿಕೊಟ್ಟಿದ್ದರು. ಬಹಳ ದಿನಗಳ ನಂತರ ತಂದೆಯ ಮನೆಗೆ ಬಂದಿದ್ದ ರೂಪಾಳಿಗೆ ಮೊದ ಮೊದಲು ಎಲ್ಲವೂ ಚೆನ್ನಾಗಿತ್ತು. ಓದೋಕಂತ ಕಾಲೇಜಿಗೂ ಸೇರಿಕೊಂಡಿದ್ದಳು. ಆದರೆ ದಿನ ಕಳೆದಂತೆಲ್ಲಾ ಮಲತಾಯಿಯ ಕಲಬೆರಕೆಯ ಅಕ್ಕರೆ, ಅಪ್ಪನ ಅಸಡ್ಡೆ ಮಾತುಗಳನ್ನು ಅರಗಿಸಿಕೊಳ್ಳೋಕಾಗದೆ ಒಳಗೊಳಗೇ ಬಾಧೆ ಪಡುತ್ತಿದ್ದಳು. ಒಲವಿನ ಎಲೆಯಿರದ ಮರದಡಿಯಲ್ಲಿ ನಿಂತವಳಿಗೆ ತಂಗಾಳಿಯಾಗಿ ಬಂದು ತಂಪೆರೆದ ಬಾಲ್ಯದ ಗೆಳೆಯ ಪ್ರಕಾಶನನ್ನು ಪ್ರೀತಿಸುವ, ಅವನನ್ನೇ ಮದುವೆಯಾಗುವ ವಾಸನೆ ಕಲಾವತಿಯ ಮೂಗಿನವರೆಗೂ ಅಡರಿತ್ತು. 'ಕಾಲೇಜಿಗೆ ಹೋಗಿ ನಾಕಕ್ಷರ ಕಲಿ ಅಂದ್ರೆ, ನಾವು ಮೆಟ್ಟು ಬಿಡೋಜಾಗದಲ್ಲಿ ನಿಲ್ಲೋಕು ಏಗ್ತಿ ಇಲ್ದವನ್ನ ಪ್ರೀತ್ಸಿ, ನಮ್ ಮನೆತನದ ಮರ್ಯಾದೆನ ಮಣ್ಣುಪಾಲು ಮಾಡೋಕೆ ವೊಲ್ಟಿದಿಯೇನೆ ಮೂದೇವಿ' ಅಂತೇಳಿ ರೂಪಾಳ ಸ್ವಾಟೆ ತಿವಿದ ಕಲಾವತಿ, 'ನಿಮ್ದೆ ಪುಡ್ರಾಜಕೀಯ ಒಂದಿದ್ರೆ ಸಾಕು, ಮನೆ ಮಠಯಾವತ್ತೂ ಬ್ಯಾಡ. ಸರೀಕರಿಗೆ ಸುಸ ಸಿಕ್ರೆ ಸಾಕು ಅದ್ನೆ ಊರ್ತುಂಬಾ ಡಂಗೂರ ಸಾರೋಕೆ ತುದಿಗಾಲ್ನನಲ್ಲಿ ನಿಂತಿರುವಾಗ, ನಿನ್ನ ಮಗಳು ಮುಕಾರಿದಪ್ಪಿದ ನನ್ನಾಟಗಳ್ನನ್ನ ಜತೆ ಓಡಿ ಹೋಗೋಕೆ ರೆಡಿಯಾಗಿದಾಳೆ. ಈ ಮದುವೆಗಿನ ಆದ್ರೆ ನಮ್ಮ ತಲೆತಗಂಡು ಒಲೆಯಾಕಿಟ್ರು ತರ್ದು! ಇದ್ನ ಜಲ್ದಿ ಕಿವಿಗೆ ಹಾಕ್ಕೊಂಡು ಇವುಳ್ನ ಯಾವೋನಿಗನ್ನ ಕೊಟ್ಟು ಮದುವೆ ಮಾಡಿ ಮರ್ಯಾದೆ ಉಳಿಸ್ಕತೀಯ' ಅಂತೇಳಿ ಗಂಡನ ಮೇಲೂ ರೇಗಿದ್ದಳು. ಪೆಟ್ರ್ಯಾವಸಕ್ಕೆ ಪಟ್ಟಾಧಾರನಾದ ಉಗ್ರಪ್ಪ ಅದೇ ಆವೇಶದ ಅವಸರದಲ್ಲಿ ಗಂಡು ಹುಡುಕಿ ರೂಪಾಳ ಸೋದರ